**ದಿನಾಂಕಃ 27/01/2025 ರಂದು ಪುನಃ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಆರೋಪಿ ಪರ ಶ್ರೀ. ಎನ್.ಕೆ.,**ವಕೀಲರಿಂದಃ**

12. ನಾನು ಹಿಟಾಚಿ ವಾಹನವನ್ನು ನೋಡಿದ ಕೊನೆಯ ದಿನಾಂಕ, ತಿಂಗಳು ಮತ್ತು ಇಸವಿಯನ್ನು ಹೇಳಲು ಆಗುವುದಿಲ್ಲ. ನಾನು ಹಿಟಾಚಿ ವಾಹನವನ್ನು ಕೊನೆಯದಾಗಿ 2017 ರಲ್ಲಿ ನೋಡಿರುತ್ತೇನೆ. 2017 ರಿಂದ ಇಲ್ಲಿಯವರಿಗೆ ನಾನು ಹಿಟಾಚಿ ವಾಹನವನ್ನು ನೋಡಿಲ್ಲ. ಆರೋಪಿತರು ಸದರಿ ಹಿಟಾಚಿ ವಾಹನವನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಹಿಟಾಚಿ ವಾಹನದ ಪೋಟೆಯನ್ನು ನಾನು ಪೊಲೀಸರಿಗೆ ನೀಡಿಲ್ಲ. ನಾನು ಆಯುಧ ಪೂಜೆಗೆ ವಾಹನವನ್ನು ಪೂಜೆ ಮಾಡುತ್ತೇನೆ. ಸದರಿ ವಾಹನದ ಪೂಜೆಯನ್ನು 3-4 ವರ್ಷ ಮಾಡಿದ್ದೆ. ಸದರಿ ವಾಹನದ ಜೊತೆ ಇರುವಂತಹ ನನ್ನ ಪೋಟೋವನ್ನು ಪೊಲೀಸರಿಗೆ ನೀಡಿಲ್ಲ. ಸದರಿ ಹಿಟಾಚಿ ವಾಹನವನ್ನು ಆರೋಪಿತರು ಎಷ್ಟು ದುಡ್ಡಿಗೆ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪಿರ್ಯಾದನ್ನು ನೀಡಿದ ಮೇಲೆ ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿಲ್ಲ. ಸದರಿ ವಾಹನವನ್ನು ಮೈಸೂರಿನ ಮುಸ್ಲಿಂ ರವರಿಗೆ ಮಾರಾಟ ಮಾಡಿದ್ದಾರೆ ಎಂದು ತಿಳಿಸಿದ್ದರು. ನಾನು ನನ್ನ ಪಿರ್ಯಾದದನ್ನು ಹೊರತು ಪಡಿಸಿ, ಬೇರೆ ಯಾವುದೇ ದಾಖಲಾತಿಗೆ ಪೊಲೀಸರ ಮುಂದೆ ಸಹಿಯನ್ನು ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಬಂದು ವಾಹನವನ್ನು ನೋಡಲು ಬಂದಾಗ, ಪೋಲೀಸರು ಮೈಸೂರಿಗೆ ಕರೆದುಕೊಂಡು ಹೋಗಿದ್ದರು. ಮೈಸೂರಿನಲ್ಲಿ ಯಾವುದೇ ಬರವಣಿಗೆಯನ್ನು ಮಾಡಿಲ್ಲ. ಸದರಿ ವಾಹನದ ದಾಖಲಾತಿಗಳು ನನ್ನ ಹೆಸರಿನಲ್ಲಿ ಇರುವ ಬಗ್ಗೆ ದಾಖಲೆಗಳನ್ನು ನೀಡಿದ್ದೇನೆ. ಆರೋಪಿತರು ಮತ್ತು ಅವರ ಮಗ ನಿಮ್ಮ ವಿರುದ್ಧ ಚೆಕ್ ಪ್ರಕರಣಗಳನ್ನು ಹೂಡಿದ್ದಾರಾ ಎಂದರೆ, ಸಾಕ್ಷಿಯು ಹೌದು ಎಂದು ನುಡಿಯುತ್ತಾ, ನಾನು ಆಸ್ಪತ್ರೆಯಲ್ಲಿ ಇದ್ದಾಗ, 3 ಚೆಕ್ ಗಳನ್ನು ಡಿಸ್ಪೆಲ್ ಹಾಕಿಸಲು ಎಂದು ಆರೋಪಿಗೆ ನೀಡಿದ್ದೆ,

ಅದನ್ನು ಅವರು ದುರುಪಯೋಗ ಪಡಿಸಿಕೊಂಡಿದ್ದಾರೆ. ನಾನು ಕೌಂಟರ್ ವೆಡ್ ಬಗ್ಗೆ ಮಾಡಿದ ಮಹಜರ ನ್ನು ನೋಡಿಲ್ಲ. ಸದರಿ ವಾಹನವನ್ನು ಖರೀದಿ ಮಾಡಿದ ಮುಸ್ಲಿಂ ರ ಹೆಸರು ನನಗೆ ಗೊತ್ತಿಲ್ಲ. ನಾನ ಕೌಂಟರ್ ವೆಡ್ ನ್ನು ಕೊನೆಯದಾಗಿ ನಾನು ಠಾಣೆಯಲ್ಲಿ ನೋಡಿದೆ. ನಂತರ ಸದರಿ ಕೌಂಟರ್ ವೆಡ್ ಏನಾಯಿತು ಎಂದು ನನಗೆ ಗೊತ್ತಿಲ್ಲ. ಯಾವುದೇ ವಾಹನವನ್ನು ಬೇರಯವರಿಗೆ ಮಾರಾಟ ಮಾಡಬೇಕಾದರೆ, ಫಾರಂ ನಂ. 29 ಮತ್ತು 30 ಅವಶ್ಯಕತೆ ಇರುತ್ತದೆ ಎಂದರೆ ಸರಿ. ಕೋರೆಗೆ ಸಂಬಂಧಿಸಿದಂತೆ ನನ್ನ ಮತ್ತು ಆರೋಪಿತರ ನಡುವೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು, ಆರೋಪಿತರು ಧನಪಾಲ ಎಂಬುವರಿಗೆ ಕೋರೆಯನ್ನು ಮಾಡಲು ನೀಡಿದ್ದು, ಸದರಿ ಧನಪಾಲ ರವರು ಶಾಂತಕುಮಾರ ರವರಿಗೆ ಕೋರೆಯನ್ನು ಮಾಡಲು ನೀಡಿದ್ದರು. ಶಾಂತಕುಮಾರ ನನ್ನ ಸ್ನೇಹಿತರಾಗಿದ್ದು, ಅವರು ನನಗೆ ಕೋರೆಯನ್ನು ಮಾಡಲು ನೀಡಿದ್ದರು ಎಂದು ನುಡಿಯುತ್ತಾರೆ. ಕೋರೆಯ ವಿಚಾರವಾಗಿ ನನಗೆ ಹಾಗೂ ಆರೋಪಿತರಿಗೆ ನೇರವಾಗಿ ಯಾವುದೇ ಕರಾರು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ನಾನು ರಾಯಲಿಟಿ ಯನ್ನು ಆರೋಪಿ, ಧನಪಾಲ ಮತ್ತು ಶಾಂತಕುಮಾರ ರವರಿಗೆ ನೀಡುತ್ತಿದ್ದೇನ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ರಾಯಲಿಟಿ ಯನ್ನು ನೀಡುತ್ತಿದ್ದ ಬಗ್ಗೆ ದಾಖಲಾತಿಯು ಇಲ್ಲ. ಆದರೆ ನಗದಾಗಿ ನೀಡುತ್ತಿದ್ದೆ. ನನ್ನ ಪಿರ್ಯಾದಿಯಲ್ಲಿ ಆರೋಪಿ ಧನಪಾಲ ರವರಿಗೆ, ಧನಪಾಲ ಶಾಂತಕುಮಾರ ರವರಿಗೆ ಹಾಗೂ ಶಾಂತಕುಮಾರ ನನಗೆ ಕೋರೆಯನ್ನು ನೀಡಿದ ಬಗ್ಗೆ ನಿಮ್ಮ ಪಿರ್ಯಾದಿಯಲ್ಲಿ ಹೇಳಿ ಬರೆಸಲು ತೊಂದರೆ ಇತ್ತಾ ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಶಾಂತಕುಮಾರ ರವರೊಂದಿಗೆ ಮಾಡಿಕೊಂಡ ಕರಾರಿನ ಪ್ರಕಾರ ಕೆಲಸವನ್ನು ಮಾಡುತ್ತಿದ್ದೆ.

13. ನಾನು 3 ಖಾಲಿ ಚೆಕ್ ಗಳನ್ನು ಆರೋಪಿಗೆ ಸಹಿ ಮಾಡಿ ನೀಡಿದ್ದೆ. ಸದರಿ ಚೆಕ್ ಗಳ ನಂಬರ್ ಗೊತ್ತಿಲ್ಲ. ಸದರಿ ಚೆಕ್ ಗಳ ಮೇಲೆ ಆರೋಪಿ ಮತ್ತು ಅವರ ಮಗ ನನ್ನ ವಿರುದ್ದ ಕೇಸ್ ನ್ನು ಹಾಕಿದ್ದಾರೆ. ನಾನು ಅಣ್ಣಯರೆಡ್ಡಿ ರವರ ಮನೆಯ ಬಳಿ ಹಿಟಾಚಿ

ವಾಹನವನ್ನು ನೀಲ್ಲಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ತೀರಿಕೊಂಡಿದ್ದೇನೆ ಎಂದು ಆರೋಪಿತ ಬೇರಯವರಿಗೆ ವಾಹನವನ್ನು ಮಾರಾಟ ಮಾಡಿದ್ದಾರೆ ಎಂದು ಕಾಂತರಾಜು ರವರು ನನಗೆ ತಿಳಿಸಲಿಲ್ಲ ಎಂದರೆ ಸರಿಯಲ್ಲ. ನಂತರ ಕೃತ್ಯ ಸ್ಥಳದ ಮಹಜರ್ ನಡೆಸಿಲ್ಲ ಎಂದರೆ ಸರಿಯಲ್ಲ. ನಂತರ ಕೌಂಟರ್ ವೆಡ್ ಸಿಗಲಿಲ್ಲ ಎಂದರೆ ಸರಿಯಲ್ಲ. ನಂತರ ಅದನ್ನು ತಂದು ಬೆಟ್ಟದಪುರ ಪೊಲೀಸ ಠಾಣೆಯಲ್ಲಿ ಹಾಜರುಪಡಿಸಿದರು ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದದನ್ನು ಹೊರತು ಪಡಿಸಿ, ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ, ಸಾಕ್ಷಿಯ ಜ್ಞಾಪಕವಿಲ್ಲ ಎಂದು ನುಡಿಯತ್ತಾರೆ. ಆರೋಪಿ ಹಿಟಾಚಿ ವಾಹನ ತನ್ನದೇ ಎಂದು ಸುಳ್ಳು ನುಡಿದು, ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚೆಕ್ ಗಳನ್ನು ಕೊಟ್ಟಿದ್ದರಿಂದ ಆರೋಪಿತನ ವಿರುದ್ಧ ಅನ್ಯತಾಪಾಯದೆಯನ್ನು ಹೊಂದಲು ಸುಳ್ಳು ದೂರನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಾನು ಈ ಕೇಸಿಗಾಗಿ ಸುಳ್ಳು ದಾಖಲಾತಿಗಳನ್ನು ಪೊಲೀಸರಿಗೆ ನೀಡಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**